# ಸಲೀನಾ ಒಬ್ಬಂಟಿತನ



ತಲೆಮಾರುಗಳಷ್ಟು ಕಾಲ ಕೂತುಣ್ಣುವಷ್ಟು ಆಸ್ತಿ–ಪಾಸ್ತಿ ಮಾಡಿದ್ದರೂ, ಜಗತ್ತಿನಾದ್ಯಂತ ಲಕ್ಷಾಂತರ ಅಭಿಮಾನಿಗಳು ಹರ್ಷೋದ್ಗಾರ ಹಾಕುತ್ತಿದ್ದರೂ, ಸೆಲೆಬ್ರಿಟಿಗಳಿಗೆ ನೆಮ್ಮದಿ ಎಂಬುದಿಲ್ಲ ಎನ್ನುವುದಕ್ಕೆ ಈಗ ಇನ್ನೊಂದು ಉದಾಹರಣೆ ಅಮೆರಿಕದ ಗಾಯಕಿ ಸಲೀನಾ ಗೋಮೆಝ್. ಇನ್ನೂ 27ರ ಹರೆಯದ ಸಲೀನಾಗೆ ಜೀವನದ ಬಗ್ಗೆ ವಿಚಿತ್ರ ಭಯವೊಂದು ಆವರಿಸಿದೆಯಂತೆ. 'ಬಹುಶಃ ಜೀವನಪೂರ್ತಿ ನಾನು ಒಬ್ಬಂಟಿಯಾಗಿಯೇ ಇರುತ್ತೇನೋನೋ...' ಎಂದು ಇನ್‌ಸ್ಟಾಗ್ರಾಮ್‌ನಲ್ಲಿ ಹೇಳಿಕೊಂಡಿದ್ದಾಳೆ. ಎಳವೆಯಲ್ಲೇ ಖ್ಯಾತಿಯ ಉತ್ತುಂಗಕ್ಕೇರಿದ ಈ ಗಾಯಕಿ, ನಟಿ, ನಿರ್ಮಾಪಕಿ 80 ದಶಲಕ್ಷ ಡಾಲರ್ ನಿವ್ವಳ ಆಸ್ತಿ ಹೊಂದಿರುವವಳು. ಈಕೆ ಹಾಡಿರುವ ಸೋಲೊ ಮ್ಯೂಸಿಕ್ ಆಲ್ಬಂಗಳು ನಾಲ್ಕೇ ನಾಲ್ಕು ಆಗಿದ್ದರೂ ಒಟ್ಟು 30 ಲಕ್ಷ ಆಲ್ಬಂಗಳು ಮಾರಾಟವಾಗಿವೆ. ಈ ವರ್ಷದ ಆರಂಭದಲ್ಲಿ ಬಿಡುಗಡೆಯಾದ Rare ಎನ್ನುವ ಆಲ್ಬಂ ಮೊದಲ ವಾರವೇ 1.12 ಲಕ್ಷ ಮಾರಾಟವಾಗಿ 'ಟಾಪ್ 30 ಚಾರ್ಟ್'ನಲ್ಲಿ 'ನಂಬರ್ ಒನ್' ಎನ್ನಿಸಿಕೊಂಡಿದೆ. ಈ ಹಿಂದೆಯೂ ಈಕೆಯ ಮ್ಯೂಸಿಕ್ ಆಲ್ಬಂಗಳು ಅತ್ಯಧಿಕ ಮಾರಾಟ ಕಂಡಿದ್ದವು. 2013ರಲ್ಲಿ ಬಂದ revival ಎನ್ನುವ ಆಲ್ಬಂ, 2015ರಲ್ಲಿ ಬಿಡುಗಡೆಯಾದ stars dance ಆಲ್ಬಂ ಕೂಡಾ 'ಟಾಪ್ 30'ಯಲ್ಲಿ ಮೊದಲ ಸ್ಥಾನದಲ್ಲಿತ್ತು. ಇಷ್ಟಾಗಿಯೂ ಈಕೆ ಈಗ ಒಬ್ಬಂಟಿತನವನ್ನು ಅನುಭವಿಸುತ್ತಿರುವುದು ಏಕೆ? ಅದಕ್ಕೆ ಕಾರಣ ಆಕೆ ಜೀವನದಲ್ಲಿ ಎದುರಿಸಿದ ಸಂಕಷ್ಟಗಳ ಸರಮಾಲೆ. ಒಂದೆಡೆ ಅನಾರೋಗ್ಯ, ಇನ್ನೊಂದೆಡೆ ಪ್ರೇಮವೈಫಲ್ಯ.

ಸಲೀನಾ ಗೋಮೆಝ್ ಎನ್ನುವ ಹೆಸರಿನ ಜೊತೆಗೇ ತಳುಕು ಹಾಕಿಕೊಂಡಿದ್ದ ಹೆಸರು ಜಸ್ಟಿನ್ ಬೀಬರ್‌ನದ್ದು. ಕೆನಡಾ ಈ ಮಾಂತ್ರಿಕ ಗಾಯಕ 13ರ ಹರೆಯದಲ್ಲೇ ಯೂಟ್ಯೂಬ್‌ನಲ್ಲಿ ತನ್ನ ಹಾಡನ್ನು ಹರಿಬಿಟ್ಟು ಜಗದ್ವಿಖ್ಯಾತಿ ಹೊಂದಿದವನು. ಇನ್ನೂ 16ರ ಹರೆಯದಲ್ಲಿದ್ದ ಬೀಬರ್ ತನಗಿಂತ ಎರಡು ವರ್ಷ ದೊಡ್ಡವಳಾದ ಸಲೀನಾಳನ್ನು ಪ್ರೀತಿಸಿದ. ಈ ಜೋಡಿ 2010ರಿಂದ ಎರಡು ವರ್ಷಗಳ ಕಾಲ ಮಾಡಿದ ಸುದ್ದಿ ಅಷ್ಟಿಷ್ಟಲ್ಲ. ಒಂದು ಕಾಲದ ಮರ್ಲಿನ್ ಮನ್ರೊ ಮತ್ತು ಜಾನ್ ಕೆನೆಡಿಯ ಜೋಡಿಯಂತೆಯೇ ಜಸ್ಟಿನ್ ಮತ್ತು ಸಲೀನಾ ಜೋಡಿ ಜಗದ್ವಿಖ್ಯಾತವಾಯಿತು. ಇಬ್ಬರೂ ಜೊತೆಯಾಗಿ ಹಾಡಿ ಕುಣಿದ ಮ್ಯೂಸಿಕ್ ಆಲ್ಬಂಗಳು ಬಿಸಿದೋಸೆಯಂತೆ ಖರ್ಚಾದವು. ಇವರ ಲೈವ್ ಕಾರ್ಯಕ್ರಮಗಳಿಗೆ ಟಿಕೆಟ್ ಸಿಗುವುದೇ ದುಸ್ತರ ಎನ್ನುವಂತಿತ್ತು. ಆದರೆ ಅದೇನಾಯಿತೋ ಗೊತ್ತಿಲ್ಲ, 2012ರಲ್ಲಿ ಈ ಜೋಡಿ ಮುರಿದುಬಿತ್ತು. ಬೀಬರ್ ಸಲೀನಾಳಿಂದ ದೂರವಾದ. ಹೇಲಿ ಬಾಲ್ಡ್‌ವಿನ್ ಎಂಬ ಮಾಡೆಲಿಂಗ್ ಸುಂದರಿಯ ಸಖ್ಯ ಬೆಳೆಸಿಕೊಂಡ. ಆರು ವರ್ಷಗಳ ಕಾಲ ಇಬ್ಬರ ಮಧ್ಯೆಯೂ ಮಾತುಗಳ, ಹಾಡುಗಳ ಕದನ. ಫೇಸ್‌ಬುಕ್, ಇನ್‌ಸ್ಟಾಗ್ರಾಮ್‌ಗಳಲ್ಲಿ ಕೋಲಾಹಲ.

ಸಲೀನಾ ಕೂಡಾ ಗೆಳೆಯರನ್ನು ಹುಡುಕತೊಡಗಿದಳು. The Weeknd ಹೆಸರಿನಿಂದ ಖ್ಯಾತಿ ಹೊಂದಿದ್ದ ಅಬೆಲ್ ಟೆಸ್‌ಫೇ ಎಂಬ ಗಾಯಕನನ್ನು ಪ್ರೀತಿಸಿದಳು. ಇಬ್ಬರೂ ಎಲ್ಲೆಂದರಲ್ಲಿ ತಿರುಗಾಡಿದರು. ಈ ಮಧ್ಯೆ ಸಲೀನಾಳಿಗೆ ಕಿಡ್ನಿ ವೈಫಲ್ಯ ಬಾಧಿಸಿತು. 'ಬೇಕಿದ್ದರೆ ನನ್ನ ಕಿಡ್ನಿ ಕೊಡುತ್ತೇನೆ' ಎಂದ ಅಬೆಲ್. ಕೊನೆಗೆ ಫ್ರಾನ್ಸಿಯಾ ರೈಸಾ ಎನ್ನುವ ಗೆಳತಿಯೊಬ್ಬಳು ಕಿಡ್ನಿ ದಾನ ಮಾಡಿ ಅದರ ಜೋಡಣೆಯೂ ಯಶಸ್ವಿಯಾಯಿತು. ಈ ಸಂಕಷ್ಟದ ನಡುವೆಯೂ ಮತ್ತೆ ಬೀಬರ್ ಜೊತೆಗೆ ಸಲೀನಾಳ ಪ್ರೀತಿ ಚಿಗುರಿತು. ಇಬ್ಬರೂ ಮತ್ತೆ ಜೊತೆಗೂಡಿ ಓಡಾಡಿದರು. 'ಸುಮ್ಮನೆ ಈ ಹುಡುಗಿ ನನ್ನ ಟೈಮ್‌ವೇಸ್ಟ್ ಮಾಡಿದ್ದಾಳೆ' ಎಂದು ಸಿಟ್ಟಿಗೆದ್ದ ಅಬೆಲ್, ಗೆಳೆತನ ಕಡಿದುಕೊಂಡ. ಆತನ ಹೊಸ ಆಲ್ಬಂ 'ಡಿಯರ್ ಮೆಲಾಂಕಲಿ'ಯಲ್ಲಿ ಆ ನೋವನ್ನೇ ಹಾಡಿನ ರೂಪದಲ್ಲಿ 'you just wasted my time' ಎಂದು ಗೋಳಾಡಿದ.

ಬೀಬರ್ ಜೊತೆಗಿನ ಸ್ನೇಹ ಸಲೀನಾಳ ಅಪ್ಪ–ಅಮ್ಮನಿಗೆ ಇಷ್ಟವಿರಲಿಲ್ಲವಂತೆ. 'ಆತನ ನಡತೆ ಸರಿಯಿಲ್ಲ, ದೂರವಿರು' ಎಂದರು. 'ಅವನು ಬದಲಾಗಿದ್ದಾನೆ' ಎಂದು ಸಲೀನಾ ಹೇಳಿದರೂ ಅವರು ಕೇಳಲಿಲ್ಲ. ಸಲೀನಾಳ ಕುಟುಂಬದ ಈ ನಿಲುವಿನಿಂದ ಸಿಟ್ಟಿಗೆದ್ದ ಬೀಬರ್ ಹೊಸ ಗೆಳತಿ ಹೇಲಿ ಬಾಲ್ಡ್‌ವಿನ್ ಜೊತೆಗೆ ನಿಶ್ಚಿತಾರ್ಥ ಮಾಡಿಕೊಂಡ. ಕಳೆದ ವರ್ಷ ಇಬ್ಬರ ಮದುವೆಯೂ ಆಯಿತು. ಈಗ ಸಲೀನಾ ಒಬ್ಬಂಟಿ.

'ಬೆಳಿಗ್ಗೆ ಹಾಸಿಗೆಯಿಂದ ಎದ್ದಾಗ ಒಬ್ಬಂಟಿತನ ಕಾಡುತ್ತದೆ. ನಾನು ಇನ್ನು ಮುಂದೆ ಒಬ್ಬಂಟಿಯಾಗಿಯೇ ಉಳಿಯುತ್ತೇನೇನೋ ಎನ್ನುವ ಆತಂಕ ಶುರುವಾಗುತ್ತದೆ. ಆದರೆ 15 ನಿಮಿಷಗಳ ಬಳಿಕ ನನ್ನನ್ನು ನಾನೇ ಸಮಾಧಾನ ಮಾಡಿಕೊಳ್ಳುತ್ತೇನೆ. ಪ್ರತಿಯೊಬ್ಬರಿಗೂ ಜಗತ್ತಿನಲ್ಲಿ ಒಂದು ಜೋಡಿ ಸಿಕ್ಕೇ ಸಿಗುತ್ತದೆ ಎಂದುಕೊಳ್ಳುತ್ತೇನೆ' ಎಂದು ಬರೆದುಕೊಂಡಿದ್ದಾಳೆ ಸಲೀನಾ. ಆಕೆಯ ಹೊಸ ಆಲ್ಬಂ Rare ನಲ್ಲೂ ಅದೇ ಭಾವ ಹಾಡಾಗಿದೆ. 'ನೀನು ಲೆಕ್ಕಿಸಬೇಡ, ನೀನು ಅತ್ಯಂತ ಅಪರೂಪ ಎಂದು ನೀನೇಕೆ ಭಾವಿಸುತ್ತಿಲ್ಲ. ಎಲ್ಲವೂ ಬೇಕೆಂದು ನಾನು ಕೇಳುತ್ತಿಲ್ಲ, ಆದರೆ ನಾನು ವಿಶೇಷ ಎಂದು ನನಗೆ ಗೊತ್ತಿದೆ. ನಾನು ಅಪರೂಪ ಎಂದು ಹೇಳುವ ಬೇರೆಯವರೂ ಇದ್ದಾರೆಂಬ ವಿಶ್ವಾಸ ನನ್ನದು...' ಹೀಗೆ ಆಕೆಯ ಹಾಡಿನ ಸಾಹಿತ್ಯ ಮುಂದುವರಿದಿದೆ. 'ನನ್ನ ಸ್ವಘನತೆ ಮತ್ತು ಆತ್ಮವಿಶ್ವಾಸದ ಸತತ ಸಂಘರ್ಷದ ಬಗ್ಗೆ ನನಗೆ ಅರಿವಿದೆ. ನನಗಿನ್ನೂ 27 ವರ್ಷ ಅಷ್ಟೇ. ನನಗಾಗಿ ಯಾರಾದರೊಬ್ಬ ಬರಲಿದ್ದಾನೆ' ಎನ್ನುವುದು ಆಕೆಯ ಸದ್ಯದ ವಿಶ್ವಾಸ.

■ ಹನಿ

Printed and Published by B.A. Ravi on behalf of The Printers (Mysore) Private Ltd. Printed at M/s Rajhan's Enterprises, No.134, 4th Main Road, Industrial Town, Rajajinagar, Bangalore - 560044 and published from The Printers (Mysore) Private Ltd., Plot Nos. 7 to12, Kumbalgodu Industrial Area, II Phase, Bengaluru - 560074. Editor: K.N. TILAK KUMAR.

Editorial Office: 75, M.G Road, Bengaluru-560 001 E-mail:editorsu@sudha.co.in. Phone: 080 45557333, Editorial:45557262,
Circ:1800-425-8009, Advt: 1800-425-8008, ©All rights reserved. Reproduction in whole or in part without permission is prohibited.
RNI No 7891/65